ಶ್ರೀ ಎಲ್. ಶ್ರೀಕಂಠಯ್ಯ:—ತಮ್ಮ ಹೇಳಿಕೆ ಪ್ರಕಾರ ಸರಕಾರ ಸುಮಾರು ೮೦ ಲಕ್ಷಕ್ಕೂ ಮೇಲ್ಪಟ್ಟು ಗ್ಯಾರಂಟೀ ಆಗಿರುವುದರಿಂದ ಇಷ್ಟು ಹಣವನ್ನು ಇಲ್ಲಿಂದ ವಾಪಸ್ ಪಡೆಯಲು ಆಗುತ್ತದೆಯೆ? ಮತ್ತು ಈಗಿರುವ ಟೆಕ್ಸ್‌ಟೈಲ್ ಇಂಡಸ್ಟ್ರೀಯಲ್ಲಿ ಒಂದು ರೀತಿಯಾದ ಕ್ರೈಸಿಸ್ ಬಂದು ಇರುವುದರಿಂದ ಯಾವ ಭರವಸೆಯಿಂದ ಮತ್ತು ಯಾರಿಂದ ಟಿಕ್ನಿಕಲ್ ಅಡ್ವೈಸು ಪಡೆದು ಇವರಿಗೆ ಗ್ಯಾರಂಟೀ ಆಗಿದ್ದೀರಿ?

ಶ್ರೀ ಪಿ. ಎಂ. ನಾಡಗೌಡ:—ಇದು ೧೯೬೦ ರಿಂದ ನಡೆದು ಬಂದಿರುವ ವ್ಯವಹಾರ. ನಾವು ಆರಂಭ ಮಾಡಿರುವುದಲ್ಲ. ೧೯೬೦ ರಿಂದ ಇಲ್ಲಿಯವರೆಗೆ ಗ್ಯಾರಂಟೀ ಕೊಟ್ಟಿರುವದು ಸುಮಾರು ೮೦ ಲಕ್ಷದವರೆಗೆ ಬರುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ:—ಇದರಲ್ಲಿ ಸುಮಾರು ೬೬.೭೦ ಲಕ್ಷದಷ್ಟು ನಷ್ಟವಾಗಿರುವುದನ್ನು ಯಾವ ರೀತಿ ಸರಕಾರದವರು ಭರ್ತಿ ಮಾಡಿಕೊಳ್ಳಬೇಕೆಂದು ಇದ್ದಾರೆ?

ಶ್ರೀ ಪಿ. ಎಂ. ನಾಡಗೌಡ:—ಈಗ ಮಾಡಿರುವ ಇಪ್ಪತ್ತು ವರ್ಷಗಳ ಅಗ್ರಿಮೆಂಟು ಪ್ರಕಾರ ನಮಗೆ ಇಲ್ಲಿ ಸುಮಾರು ೪೦ ಎಕರೆ ಭೂಮಿ ಹಾಗೂ ಲ್ಯಾಂಡು ನಮಗೇ ಉಳಿಯುತ್ತದೆ ಮತ್ತು ಇವರ ಲೀಸ್ ಪೀರಿಯಡ್ ಮುಗಿಯುವುದರೊಳಗೆ ಸರಕಾರಕ್ಕೆ ಸುಮಾರು ೨೨ ಲಕ್ಷದಷ್ಟು ಬಡ್ಡಿ ಕೂಡ ಉಳಿಯುತ್ತದೆ

LIFT IRRIGATION SCHEME ON RIGHT BANK OF CAUVERY RIVER IN T-NARASIPUR TALUK

331. Sri T. P. BORAIAH (Bannur) —Will the Minister of State for minor Irrigation be pleased to state :—

(*a*) the stage at which the Lift Irrigation Schemes on the right bank of Cauvery river in T. Narasipur taluk stands at present,

(*b*) the extent of atchkat under each project ;

(*c*) the village that come under the said scheme ;

(*d*) the estimated amount of each project ;

(*e*) when the said works will be commenced ;

A.—Smt. BASAVARAJESWARI Deputy Minister for Social Welfare)

[on behalf of Sri A. J. DODDAMETI (Minister of State for Minor Irrigation]

(*a*) Works relating to Malangi and Channabasavana Hundi Lift Irrigation Schemes are on the verge of completion. Mavinahalla Lift Irrigation Scheme is under reconsideration.

(*b*) Malangi scheme	...	490 acres
Channabasavana Hundi scheme	...	300 acres
Mavinahalli scheme	...	280 acres

(*c*) Malangi, Mavinahaili, Akkur, Chandahalli, Maradipur and Channabasavana Hundi.

(SMT. BASAVARAJESWARI)

		Rs.
(*d*) Malangi scheme	...	1,93,000
Basavana Hundi scheme	...	96,000
Mavinahalli scheme	...	75,000

(*e*) Malangi and Channabasavana Hundi Lift Irrigation schemes have already been taken up and they are on the verge of completion. After reconsideration of Mavinahole Scheme, the question of undertaking the said work will be considered.

ಶ್ರೀ ಟಿ. ಪಿ. ಬೋರಯ್ಯ :—ಮಾವಿನಹಳ್ಳಿ ಯೋಜನೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ ? ಇದಕ್ಕೆ ಕಾರಣವೇನು ?

ಶ್ರೀಮತಿ ಬಸವರಾಜೇಶ್ವರಿ :—ಮೊದಲು ಇದರ ಅಂದಾಜು ತಯಾರು ಮಾಡಿದ ಪ್ರಕಾರ ಈ ಯೋಜನೆಯ ಅಚ್ಚುಕಟ್ಟು ಸುಮಾರು ೮೦ ಎಕರೆ ಬರುತ್ತದೆ ಎಂದು ಇತ್ತು. ಮತ್ತು ಇದರಲ್ಲಿ ಕೆಲವರು ಪ್ರೈವೇಟ್ ಓನರುಗಳು ಇಲ್ಲಿ ಲಿಫ್ಟ್ ಇರಿಗೇಷನ್ ಮೂಲಕ ವ್ಯವಸಾಯ ಮಾಡಬೇಕೆಂದು ಪಂಪು ಸೆಟ್ಟುಗಳನ್ನು ಹಾಕಿಸಿಕೊಂಡಿದ್ದಾರೆ. ಇದಕ್ಕಾಗಿ ಇದನ್ನು ಈಗ ಯಾವ ರೀತಿ ಮಾಡಲು ಸಾಧ್ಯವಾಗುತ್ತದೆ ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ.

WAGES OF THE WORKERS OF INDIAN PLYWOOD LTD. DANDELI.

48. SRI M. S. KRISHNAN (Malleswaram.):—

Will the Minister for Law, Labour and Parliamentary Affairs be pleased to state :—

(*a*) whether the workmen of Indian Plywoods Ltd., Dandeli had made a representation to the Chief Minister and Finance Minister to persuade the Management to revise the low wages ;

(*b*) whether the Chief Minister had assured that he would do the needful in the matter :

(*c*) the rates of wages, D. A., etc., obtaining in the said Company (wage statement may be given separately) ;

(*d*) whether these wages are the lowest in the region ;

(*e*) whether there was any strike by workmen in the beginning of 1969 for enhancement of wages, etc., if so, the dates and period of the strike ;

(*f*) whether there is any settlement (copy of settlement may be provided) ?